# ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಕೆ.ಆರ್.ನಗರ

**ಸಿಮಿಸ್ 162/2019**

***ಪಿಡಬ್ಲ್ಯೂ.1***

ಸಾಕ್ಷಿಯನ್ನು ದಿನಾಂಕ 29.01.2021 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಶ್ರೀ ಕೆ ಎನ್ ಎಸ್ ವಕೀಲರಿಂದ ಅರ್ಜಿದಾರರ ಪರ ವಕೀಲರು

ನನ್ನ ಮದುವೆ ಎದುರುದಾರವರೊಂದಿಗೆ ದಿನಾಂಕ 17.03.2016 ರಂದು ಹೊಳೆನರಸೀಪುರದ ವೀರಭದ್ರೇಶ್ವರದ ಕಲ್ಯಾಣ ಮಂಟಪದಲ್ಲಿ ಗುರು ಹಿರಿಯರ ಸಮಕ್ಷಮದಲ್ಲಿ ಹಿಂದೂ ಸಂಪ್ರದಾಯದಂತೆ ನೆರವೆರಿತ್ತು. ಮದುವೆ ನಂತರ ನಾನು ಎದುರುದಾರರವರೊಂದಿಗೆ ನರಚನಹಳ್ಳಿ ಅವರ ಸ್ವಗ್ರಾಮಕ್ಕೆ ಹೋಗಿ ಅವರ ಮನೆಯಲ್ಲಿ ವೈವಾಹಿಕ ಜೀವನವನ್ನು ಪ್ರಾರಂಭಿಸಿದ್ದೆ. ನಾನು ಹಾಗೂ ಎದುರುದಾರ ಇವರ ವೈವಾಹಿಕ ಜೀವನ ಸ್ವಲ್ಪ ದಿನಗಳ ಕಾಲ ಅನ್ಯೋನ್ಯವಾಗಿತ್ತು. ನನಗೆ ಒಂದು ಗಂಡು ಮಗು ಇದ್ದು, ಅದರ ಹೆಸರು ಅನ್ವಿತ, ಈಗ ನನ್ನ ಮಗನಿಗೆ 3 ವರ್ಷ ವಯಸ್ಸು, ನನ್ನ ಮಗ ನನ್ನ ಬಳಿ ಇರುತ್ತಾನೆ. ನಾನು ಮದುವೆ ಆದ ನಂತರ ನನ್ನ ಮಗು ಹುಟ್ಟಿದಾಗಿನಿಂದ ನನ್ನ ತವರು ಮನೆಯಲ್ಲಿ ಇದ್ದು ಎದುರುದಾರರು ಇವರು ಯಾವತ್ತಿಗೂ ಸಹ ನನಗೂ ಮತ್ತು ನನ್ನ ಮಗುವಿಗೂ ನೋಡಲು ಬಂದಿರುವುದಿಲ್ಲ. ಎದುರುದಾರರು ಇವರು 2 ನೇ ಮದುವೆ ಆಗಿರುತ್ತಾರೆ. ಮದುವೆ ನಂತರ ಎದುರುದಾರರು ಇವರು 2 ತಿಂಗಳು ಕಾಲ ನನಗೆ ಸರಿಯಾಗಿ ನೋಡಿಕೊಂಡು ನಂತರ, ನನಗೆ ಹೊಡೆಬಡೆ ಮಾಡುವುದು ಮತ್ತು ಮನೆಯಿಂದ ಆಚೆ ಹೋಗು ಎಂದು ಹೇಳುತ್ತಿದ್ದರು.

2. ಎದುರುದಾರರು ಇವರು ವರದಕ್ಷಿಣೆ ತೆಗೆದುಕೊಂಡು ಬಾ ಎಂದುಹೇಳಿ ನನಗೆ ಕಿರುಕುಳ ನೀಡುತ್ತಿದ್ದರು. ಒಂದು ದಿನ ನಾನು ನನ್ನ ತವರು ಮನೆಯಲ್ಲಿದ್ದಾಗ ನನ್ನ ಮಗು ಹೊರಗಡೆ ಆಟ ಆಡುತ್ತಿರುವಾಗ ನಮಗೆ ಹೇಳದೆ ಕೇಳದೆ ಎದುರುದಾರರು ಇವರು ಮಗುವನ್ನು ಎತ್ತುಕೊಂಡು ಹೋಗಿದ್ದರು ನಂತರ ಆ ಬಗ್ಗೆ ಪೋಲಿಸ್ ಠಾಣೆಗೆ ದೂರನ್ನು ನೀಡಿದ್ದೆವು. ನಂತರ ನಾನು ದೂರನ್ನು ನೀಡಿದ ನಂತರ ಪ್ರಕರಣ ದಾಖಲಾಯಿತು. ನಾನು ಈಗ ನನ್ನ ತಂದೆ ತಾಯಿ ಇವರ ಮನೆಯಲ್ಲಿ ವಾಸವಾಗಿದ್ದೇನೆ.

3. ಎದುರುದಾರರು ಇವರು ಹೊಲದ ಕೆಲಸ ಮಾಡುತ್ತಾರೆ. ಎದುರುದಾರರು ಇವರಿಗೆ ವಾರ್ಷಿಕ ಎಷ್ಟು ಆದಾಯ ಬರುತ್ತದೆ ಎಂದು ನಿಖರವಾಗಿ ಹೇಳಲಾಗುವುದಿಲ್ಲ.

4. ವಿವಾಹ ಆಮಂತ್ರಣವನ್ನು ನಿಪಿ 1 ಎಂದು, ಫೋಟೋಗಳನ್ನು ನಿಪಿ 2 ಹಾಗೂ 3 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಅರ್ಜಿದಾರರ ಪರ ವಕೀಲರು ಮುಂದಿನ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದರಿಂದ ನೀಡಲಾಯಿತು.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಗಾಯತ್ರಿ)
C/c ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ